ಶ್ರೀ ಎಂ. ರಾಮಣ್ಣ :—ವರ್ಷದಲ್ಲಿ ೫-೬ ಸಲ ಕೋಡಿ ಬೀಳುವುದರಿಂದ ಕ್ರೆಸ್ಟ್‌ಗೇಟ್ ಇಟ್ಟು ಬೇರೆ ಕಡೆಗೆ ನೀರನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್ :—ಈ ಏರಿಯಾ ಇನ್ನೂ ಪೂರ್ತಿಯಾಗಿ ಡೆವಲಪ್ ಆಗಿಲ್ಲ. ೫ ಸಾವಿರದ ೮೨೦ ಎಕರೆ ಡೆವಲಪ್ ಆಗಬೇಕಾಗಿದೆ. ೩,೮೦೦ ಎಕರೆ ಡೆವಲಪ್ ಆಗಿದೆ. ಎಷ್ಟು ಏಕರ್ಸ್ ಮಾಡಬಹುದು, ಎಷ್ಟು ಈಲ್ಡ್ ಬರುತ್ತದೆ, ಎರಡನೇ ಕಡೆಗೆ ಡೆವಲಪ್ ಮಾಡುವುದಕ್ಕೆ ಸಾಧ್ಯವಿದೆಯೇ ಅಂತ ಪೂರ್ತಿ ಡೆವಲಪ್ ಆಗುವವರೆಗೂ ಹೇಳುವುದಕ್ಕೆ ಕಷ್ಟವಾಗುತ್ತದೆ.

SRI C. K. RAJIAH SETTY :—Is the Government aware that in the upper catchment of the tank a new tank *viz.* Gentahalli Tank has been proposed and is it already under execution ?

ಶ್ರೀ ವೀರೇಂದ್ರ ಪಾಟೀಲ್:—ಅದರ ಬಗ್ಗೆ ನನ್ನ ಹತ್ತಿರ ಸಮಾಚಾರ ಇಲ್ಲ.

ಶ್ರೀ ಬಿ. ಎನ್. ರಾಮೇಗೌಡ :—೪-೫ ವರ್ಷ ಕಾದು ನೋಡಬೇಕೆಂದು ಹೇಳಿದ್ದೀರಿ. ಇದರ ಮೇಲ್ಗಡೆ ಗಂಡಿಹಳ್ಳಿ ಟ್ಯಾಂಕು ಹೊಸದಾಗಿ ಕಟ್ಟುವುದಕ್ಕೆ ಮಂಜೂರು ಮಾಡುವುದರ ಬಗ್ಗೆ ತಕರಾರು ಬಂದು ೪-೫ ವರ್ಷ ನೀರು ಬರುತ್ತದೆಯೇ ಇಲ್ಲವೇ ಎಂಬುದನ್ನು ನೋಡಿ ನಂತರ ಕಟ್ಟಬೇಕು ಅಲ್ಲಿಯವರೆಗೂ ಕಟ್ಟಕೂಡದು ಅಂತ ಟೆಕ್ನಿಕಲ್ ಒಪೀನಿಯನ್ ಬಂದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್ :—ಟೆಕ್ನಿಕಲ್ ಒಪೀನಿರ್ಯ ಯಾವುದೂ ಬಂದಿಲ್ಲ, ಇನ್ನೂ ಆಬ್‌ಸರ್ವ್ ಮಾಡುತ್ತಾ ಇದ್ದಾರೆ, ಪ್ರತಿವರ್ಷ ಈಲ್ಡ್ ಎಷ್ಟು ಬರುತ್ತದೆ, ಎಷ್ಟು ಏರಿಯಾ ಡೆವಲಪ್ ಆಗುತ್ತದೆ, ಡೆವಲಪ್ ಆದಮೇಲೆ ಎಷ್ಟು ಈಲ್ಡ್ ಬರುತ್ತದೆ ಎಂಬುದನ್ನು ತಿಳಿದುಕೊಳ್ಳುವವರೆಗೂ ಕ್ರೆಸ್ಟ್‌ಗೇಟ್ ಹಾಕುವುದಕ್ಕೆ ಬರುವುದಿಲ್ಲ. ಇದನ್ನೆಲ್ಲಾ ತಿಳಿದುಕೊಳ್ಳಬೇಕಾದರೆ ೪-೫ ವರ್ಷ ತಡೆದು ನೋಡಬೇಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಮುಂದೆ ಈ ಜಲಾಶಯದ ಹೆಚ್ಚುವರಿ ನೀರು ಇದ್ದಲ್ಲಿ ಶಿರಾ ತಾಲ್ಲೂಕಿನ ಕ್ಷಾಮ ಪ್ರದೇಶಕ್ಕೆ ಆ ನೀರನ್ನು ಉಪಯೋಗಿಸಿಕೊಳ್ಳಬೇಕೆಂದು ಅನೇಕ ವೇಳೆ ಅಲ್ಲಿನ ರೈತರ ಪ್ರತಿನಿಧಿಗಳು, ಮನವಿ ಕೊಟ್ಟಿದ್ದಾರೆ. ಇದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್ :—ಬಹುಶಃ ಈ ಪ್ರಶ್ನೆ ಮುಂದೆ ಉದ್ಭವಿಸುತ್ತದೆ, ಇವತ್ತು ಹೇಳುವುದು ಕಷ್ಟ.

ಶ್ರೀ ಎಂ. ಎನ್. ರಾಮಣ್ಣ :—ಎಷ್ಟು ವರ್ಷದಲ್ಲಿ ಈ ಏರಿಯಾ ಡೆವಲಪ್ ಆಗಬಹುದು? ಇದಕ್ಕೆ ಒಂದು ಕಾಲ ಮಿತಿ ಹಾಕಿ ಕ್ರೆಸ್ಟ್‌ಗೇಟ್ ಇಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್ :—ಇದೇನೂ ಅಂತಹ ದೊಡ್ಡ ರಿಸರ್ವಾಯರ್ ಅಲ್ಲ. ಎಷ್ಟು ಜಾಗ್ರತೆ ಆಗುತ್ತದೆ ಅಷ್ಟು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

CONSTITUTION OF PROPAGANDA COMMITTEES ON EVIL EFFECTS OF DRINKING

440 SRI M. H. JAYAPRAKASH NARAYAN (SIRSI).—

Will the Minister for Finance, Planning and Youth Welfare be pleased to state :—

(*a*) whether the Government has decided to appoint Propagauda Committees at State and District levels to make Propaganda in the

State among Harijans, Girijans, Poor and Backward Classes and relieve them from the evil effects of drinking ;

(*b*) if so, the names of the presidents and members of the said Committes at State and District levels ;

(*c*) the powers given by the Government to the said Propaganda Committees and the duties entrusted to the said Committees ;

(*d*) the financial assistance given by the State Government to the said Committees ?

SRI RAMAKRISHNA HEGDE (MINISTER FOR FINANCE, PLANNING AND YOUTH WELFARE).

(*a*) Under consideration of Government.

(*b*), (*c*) and (*d*) Does not arise in view of reply to Clause (*a*).

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ :—ಟೆಂಪರ್‌ನ್ಸ್ ಕಮಿಟಿಯನ್ನು ರಚನೆ ಮಾಡುವ ಬಗ್ಗೆ ಸರ್ಕಾರದವರು ಪತ್ರಿಕಾ ಗೋಷ್ಠಿಯನ್ನು ಏನಾದರೂ ನಡೆಸಿ ಈ ಒಂದು ಒಂದೂವರೆ ತಿಂಗಳಿನಲ್ಲಿ ಯಾವುದಾದರೂ ಪ್ರಕಟನೆಗಳನ್ನು ಹೊರಡಿಸಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ :—ಇದರ ಬಗ್ಗೆ ಪತ್ರಿಕಾ ಗೋಷ್ಠಿಯನ್ನು ನಡೆಸಲಿಲ್ಲ, ಪತ್ರಿಕಾ ಕರ್ತರನ್ನು ಭೇಟಿಯಾದಾಗ ಬೇರೆ ವಿಚಾರ ಬಂತು. ಅದರ ಜೊತೆಗೆ ಈ ವಿಚಾರ ಬಂದಾಗ ಸರ್ಕಾರದವರು ಈ ವಿಚಾರ ಏನಾದರೂ ಯೋಚನೆ ಮಾಡಿದ್ದೀರಾ ಅಂತ ಕೇಳಿದರು, ಮಾಡುತ್ತಾ ಇದ್ದಾರೆ ಅಂತ ಹೇಳಿದ್ದೇನೆ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ :—ಮಾನ್ಯ ಆರ್ಥಿಕ ಸಚಿವರು ೧೯೬೯ನೇ ಸಾಲಿನಲ್ಲಿ ಬಡ್ಜೆಟ್ ಭಾಷಣವನ್ನು ಮಾಡುವಾಗ ಈ ವಿಧವಾದ ಒಂದು ಸಮಿತಿಯನ್ನು ರಚನೆ ಮಾಡಿ, ಇದರಿಂದಾಗುವ ದುಷ್ಪರಿಣಾಮವನ್ನು ನಿಲ್ಲಿಸುವುದಕ್ಕೆ ಪ್ರಚಾರ ಮಾಡುತ್ತೇವೆ ಎಂದು ಹೇಳಿದ್ದರು. ೧ನೇ ಏಪ್ರಿಲ್ ೧೯೭೦ರಲ್ಲಾದರೂ ಈ ಸಮಿತಿಯನ್ನು ರಚನೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ :—ಆದಷ್ಟು ಬೇಗ ರಚನೆ ಮಾಡುತ್ತೇವೆ.

ಶ್ರೀ ಸಿದ್ಧಯ್ಯ ಕಾಶಿಮಠ :—ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲೇ ಅಲ್ಲದೆ ತಾಲ್ಲೂಕು ಮಟ್ಟದಲ್ಲೂ ಇಂತಹ ಸಮಿತಿಯನ್ನು ನೇಮಕ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ :—ಸಧ್ಯಕ್ಕೆ ರಾಜ್ಯಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಮಾಡೋಣ. ಆದರಿಂದ ಏನಾದರೂ ಉಪಯೋಗವಾಗುತ್ತದೆ ಎಂದು ಕಾಡರೆ ತಾಲ್ಲೂಕು ಮಟ್ಟದಲ್ಲಿ ನೇಮಿಸುವುದನ್ನು ವಿಚಾರ ಮಾಡಬಹುದು.

ಶ್ರೀ ಹೆಚ್. ಸಿದ್ದವೀರಪ್ಪ:—ಇಂತಹ ಪ್ರಚಾರ ಸಮಿತಿಗಳಿಗೆ ಬದಲು ಪ್ರಚಾರಕರನ್ನು ನೇಮಕ ಮಾಡಿ ಪ್ರತಿಯೊಂದು ಹೆಂಡದ ಅಂಗಡಿಯಲ್ಲೂ ಅದರ ಬಾಗಿಲು ತೆಗೆದಾಗ ಮದ್ಯ ಕುಡಿಯಬೇಡಿ ಅಂತ ಪ್ರಚಾರ ಮಾಡಲಿಕ್ಕೆ ಹೇಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ ;—ಆ ಯೋಚನೆ ಸದ್ಯಕ್ಕೆ ಸರ್ಕಾರದಲ್ಲಿ ಇಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಮಾನ್ಯ ಆರ್ಥಿಕ ಸಚಿವರು ಪತ್ರಿಕಾಪ್ರತಿನಿಧಿಗಳೊಡನೆ ಸಮಾಲೋಚನೆ ಮಾಡಿದಾಗ ಹೇಳಿದ್ದು ಪತ್ರಿಕೆಯಲ್ಲಿ ವರದಿಯಾಗಿತ್ತು, ಈ ಸಭೆಯ ಮಾನ್ಯ ಸದಸ್ಯ ರೊಬ್ಬರನ್ನು ಅಂದರೆ ಶ್ರೀ ಮಾನ್ ಪ್ರಭಾಕರ್‌ರವರ ಹೆಸರನ್ನು ಈ ಸಮಿತಿಯ ಚೇರ್ಮನ್ನರಾಗಿ ಮಾಡುತ್ತಾರೆಂದು ಹೇಳಿ ಸೂಚಿಸಿತ್ತು. ಇತ್ತೀಚೆಗೆ ಅವರು ಆ ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಬಂದದ್ದರಿಂದ ಆ ಹೆಸರನ್ನೇನಾದರೂ ಬಿಟ್ಟುಕೊಡಲಾಗಿದೆಯೇ ? ಅದನ್ನೇನಾದರೂ ಸರ್ಕಾರದವರು ಗಮನದಲ್ಲಿಟ್ಟು ಕೊಂಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ :—ಇದರಲ್ಲಿ ಪಕ್ಷಾಂತರದ ದೃಷ್ಟಿಯಿಂದ ನಾವು ತೀರ್ಮಾನ ತೆಗೆದು ಕೊಳ್ಳುವುದಿಲ್ಲ. ಯಾರು ಯೋಗ್ಯರೆಂಬುದನ್ನು ನೋಡಿ ಹಾಕುತ್ತೇವೆ.

ಶ್ರೀ ಬಿ. ಪಿ. ಗಂಗಾಧರ್ :—ಹೆಂಡ, ಅರ್ಯಾಕ್ ಮಾರಕ್ಕೆ ಜಾಗದಲ್ಲಿ ದೊಡ್ಡ ದೊಡ್ಡ ಬೋರ್ಡ್ ಗಳನ್ನು ಹಾಕಿ ಇಂತಿಂತಹ ದುಷ್ಪರಿಣಾಮವಾಗುತ್ತದೆ, ಹೆಂಡವನ್ನು ಕುಡಿಯಬಾರದು ಎಂದು ತಿಳಿಸಬೇಕೆಂದು ಮಾಲೀಕರ ಮೇಲೆ ಒಂದು ಒತ್ತಾಯ ತರಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ :—ಆ ರೀತಿ ಮಾಡುವುದಕ್ಕೆ ಕಷ್ಟವಾಗಬಹುದು. ಅಮೇರಿಕಾ, ಇಂಗ್ಲಂಡ್ ನಲ್ಲಿ ಸಿಗರೇಟ್ ಮೇಲೆ " ಇಂಜ್ಯೂರಿಯಸ್ ಟು ಹೆಲ್ತ್ " ಇಂತ ಬರೆದಿರುತ್ತಾರೆ. ಹಾಗೆ ಚಾಟಲ್ ಮೇಲೆ ಮಾಡಿದರೆ ಚಾಟಲ್ ನೋಡಿಕೊಂಡು ಯಾರು ಕುಡಿಯುತ್ತಾರೋ ಯಾರು ಕುಡಿಯುವುದಿಲ್ಲವೋ ಗೊತ್ತಿಲ್ಲ. ಸಮಿತಿ ಮಾಡಿ ಆ ಮುಖಾಂತರ ಈ ವಿಚಾರ ಮಾಡಲಿಕ್ಕೆ ಪ್ರಯತ್ನ ಮಾಡಬಹುದು ಅಷ್ಟೆ.

ಶ್ರೀ ಎಂ. ನಾಗಪ್ಪ:—ಈ ಟೆಂಪರೆನ್ಸ್ ಕಮಿಟಿ ಎಕ್ಸೈಜ್ ಬಗ್ಗೆ ಕಾನೂನಿನ ಪ್ರೊವಿಜನ್ಸ್ ಇಂಪ್ಲಿಮೆಂಟ್ ಮಾಡುವ ವಿಚಾರದಲ್ಲಿ ಮಂತ್ರಿಗಳಿಗೂ ಸಹ ಅಡ್ವೈಸ್ ಮಾಡಲಿಕ್ಕೆ ಅಧಿಕಾರ ಇರುತ್ತದೆಯೇ ?

M. R. SPEAKER:—The Supplimentary is disallowed as it is outside the Scope of the main question.

ಶ್ರೀ ಎಸ್. ವಿ. ಅಗ್ನಿಹೋತ್ರಿ :—ಇಂತಹ ಸಮಿತಿಯ ಚೇರ್ಮನ್ನರು ಹೆಚ್ಚಾಗಿ ಕುಡಿಯುವವರು, ಕುಡುಕರು ಇರಬೇಕೆಂದು ಮಾಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ :—ಯಾರಿಗೆ ಕುಡಿಯುವ ಚಟ ಇದೆ ಅಂಥವರೇ ಸಮಿತಿಯ ಚೇರ್ಮನ್‌ರು ಆಗಬೇಕೆಂಬ ವಿಚಾರ ಇಲ್ಲ. ಹಿಂದೆ ಕುಡಿಯುವುದನ್ನು ಕಲಿತಂಥವರು ಇದ್ದರೂ ಯೋಚನೆ ಮಾಡ. ಬಹುದು. (ನಗು).

POULTRY SECTION AT HEBBAL SERUM INSTITUTE

536. Sri G. RAMB GOWDA (Doddaballapur).—

Will the Minister of State for Veterinary Services, Animal Husbandry and Dairy Development be pleased to state :—

(*a*) since how long the poultry section attached to the Serum Institute at Hebbal is functioning ;

(*b*) the products of the poultry section

(*c*) the investment on the machinery and equipment of this section